ದಿನಾಂಕ 21.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ- ಶ್ರೀ.ಡಿ.ಡಿ ವಕೀಲರಿಂದಃ-</u>**

ಮೃತ ಅರವಿನ್ ನನ್ನ ಗಂಡ. 2ನೇ ಪ್ರತಿವಾದಿ ನನ್ನ ಮಗ. ವಾದಿ ಮತ್ತು ನನ್ನ ಗಂಡ ಸ್ನೇಹಿತರಾಗಿದ್ದರು ಎಂದರೆ ಸರಿ. ನನ್ನ ಗಂಡ ಬದುಕಿದ್ದಾಗ ವಾದಿಯು ನಮ್ಮ ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದರು. 2021 ರ ಜೂನ್ ವರೆಗೆ ನನ್ನ ಮಗ ಗೋಣಿಕೊಪ್ಪದ ಕಾಲ್ಸ್ ಶಾಲೆಯಲ್ಲಿ ಓದುತ್ತಿದ್ದನು. ಜೂನ್ ನಂತರ, ಸ್ಯಂಟ್ ಆಂಟೋನಿ ಶಾಲೆಗೆ ದಾಖಲಾಗಿರುತ್ತಾನೆ. ನನ್ನ ಗಂಡ ಬದುಕಿದ್ದಾಗ ಎಸ್ಟೇಟ್ ನ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿ್ತದ್ದರು. ಎಸ್ಟೇಟ್ ನ ವಿಚಾರಗಳನ್ನು ನನಗೆ ತಿಳಿಸುತ್ತಿದ್ದರು.

ಜನವರಿ 2021 ರಲ್ಲಿ ನಮ್ಮ ಎಸ್ಟೇಟ್ ನಲ್ಲಿ ಕಾಫಿ ಕೊಯ್ಲು ಆಗಿತ್ತು. ನನ್ನ ಗಂಡ ಜೀವಂತವಾಗಿದ್ದಾಗ, ಎಸ್ಟೇಟ್ ನ ಕಾಫಿಯನ್ನು ಕೊಯ್ಲು ಮಾಡಿದ ಬಳಿಕ ಅದನ್ನು ಒಣಗಿಸಿ, ನಂತರ ಮಾರಾಟ ಮಾಡುತ್ತಿದ್ದರು. ದಿಃ 03.05.2021 ರಂದು ನನ್ನ ಗಂಡ ಕೋವಿಡ್ ನಿಂದ ಮೃತರಾಗಿರುತ್ತಾರೆ. ನನ್ನ ಗಂಡ ಮೃತರಾಗುವುದಕ್ಕಿಂತ ಒಂದು ವಾರದ ಮುಂಚೆ ಆಸ್ಪತ್ರೆಗೆ ದಾಖಲಾಗಿದ್ದರು. ನನ್ನ ಗಂಡ ಸಾಮಾನ್ಯವಾಗಿ ಚೆಕ್ಕ್ ಪುಸ್ತಕವನ್ನು ಮನೆಯಲ್ಲಿ ಇಡುತ್ತಿರಲಿಲ್ಲ. ಅವರು ಯಾವಾಗಲೂ ತನ್ನ ಕಾರಿನಲ್ಲಿ ಇಟ್ಟು ಕೊಳ್ಳುತ್ತಿದ್ದರು. ಆ ಕಾರಣದಿಂದ, ವಾದಿಯು ಚೆಕ್ಕನ್ನು ತೆಗೆದುಕೊಂಡಿರಬಹುದೆಂದು ಊಹಿಸಿ ನನ್ನ

ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಪ್ಯಾರಾ 13 ರಲ್ಲಿ ತಿಳಿಸಿರುತ್ತೇನೆ.

ನನ್ನ ಗಂಡ ಆಸ್ಪತ್ರೆಯಲ್ಲಿ ದಾಖಲಾದ ದಿನದಿಂದ ಅವರ ಕಾರು ನಮ್ಮ ಮನೆಯ ಹತ್ತಿರವೇ ಇತ್ತು. ನನ್ನ ಗಂಡನ ಮೃತದೇಹವನ್ನು ದಫನ್ ಮಾಡಲು ಜೆ.ಸಿ.ಬಿ. ಯನ್ನು ನನ್ನ ತಂದೆ ಮತ್ತು ತಮ್ಮ ತರಿಸಿದ್ದರು. ನನ್ನ ಗಂಡನ ಮೃತದೇಹವನ್ನು ದಫನ್ ಮಾಡಲು ಜೆ.ಸಿ.ಬಿ.ಯನ್ನು ತರಿಸಿ, ದಫನ್ ಕಾರ್ಯವನ್ನು ವಾದಿಯು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಶಾನೆ ಪಿ. 1 ಮತ್ತು 2 ಚೆಕ್ಕುಗಳಲ್ಲಿರುವ ಸಹಿಗಳು ನನ್ನ ಗಂಡನ ಸಹಿಗಳು ಎಂದರೆ ಸರಿಯಲ್ಲ. ಸದರಿ ಸಹಿಗಳು ನನ್ನ ಗಂಡನ ಸಹಿಗಳಾಗಿದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಜನವರಿ 2021 ರಂದು ನನ್ನ ಗಂಡ ವಾದಿಯಿಂದ ರೂ.4,80,000/- ಗಳನ್ನು ಸಾಲವಾಗಿ ಪಡೆದು, ಅದರ ಭದ್ರತೆಗಾಗಿ ನಿಶಾನೆ ಪಿ. 1 ಮತ್ತು 2 ಚೆಕ್ಕುಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯ ಮನೆಗೆ ಯಾವತ್ತೂ ಹೋಗಿರುವುದಿಲ್ಲ. ವಾದಿಯು ರಸ್ತೆಯಲ್ಲಿ ಸಿಕ್ಕಿದ ಸಂದರ್ಭದಲ್ಲಿ ನೋಟಿಸ್ ಬಗ್ಗೆ ಕೇಳಿರುತ್ತೇನೆ. ನಿಶಾನೆ ಡಿ. 3 ರಿಂದ 6 ದಾಖಲೆಗಳನ್ನು ನನ್ನ ಮಗನ ಶಾಲಾ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಹಾಗೂ ನನ್ನ ಗಂಡನ ಸಹಿಗೆ ಸಂಬಂಧಿಸಿದಂತೆ ಹಾಜರುಪಡಿಸಿರುತ್ತೇನೆ.

ನಿಶಾನೆ ಡಿ. 5 ರಲ್ಲಿ ನನ್ನ ಗಂಡನ ಸಹಿ ಇದೆ. ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ. 8 ಎಂದು ಗುರುತಿಸಲಾಯಿತು. ನಿಶಾನೆ ಪಿ. 8 ರಲ್ಲಿರುವ ಸಹಿಗೂ, ನಿಶಾಪಿ.1(ಎ) ಮತ್ತು 2(ಎ) ಸಹಿಗಳು ಒಂದೇ ರೀತಿ ಇವೆ ಎಂದರೆ ಸರಿಯಲ್ಲ. ನನ್ನ ಮಗನ ಶಾಲೆಯ ಅವಧಿಯು ನನ್ನ ಕೆಲಸದ ಅವಧಿಗೆ ಸಹಿ ಹೊಂದದೇ ಇದುದ್ದರಿಂದ,ಅವನನ್ನು ಕಾಲ್ಸ್ ಶಾಲೆ ಬಿಡಿಸಿ ಸೆಂಟ್ ಆಂಟೋನಿ ಶಾಲೆಗೆ ಸೇರಿಸಿರುತ್ತೇನೆ. ನನಗೆ ಆರ್ಥಿಕ ಸಮಸ್ಯೆ ಇದ್ದುದ್ದರಿಂದ ನನ್ನ ಮಗನನ್ನು ಸೆಂಟ್ ಆಂಟೋನಿ ಶಾಲೆಗೆ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ವಾದಿಯಿಂದ ಪಡೆದುಕೊಂಡ ಹಣವನ್ನು ಹಿಂತಿರುಗಿಸಲು ನಾನು ಬದ್ಧಳಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಹಣ ಕೊಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.